**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.47/2023**

ದಿಃ 02.12.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

**Cw-22 Pw-3**

| | | |
|---|---|---|
| ಹೆಸರು | ಃ | ಕೃಷ್ಣಪ್ಪ |
| ತಂದೆಯ ಹೆಸರು | ಃ | ಲೇಟ್ ಚಿಕ್ಕಣ್ಣ |
| ವಯಸ್ಸು | ಃ | 64 ವರ್ಷ |
| ಉದ್ಯೋಗ | ಃ | ನಿವೃತ್ತ ಮುಖ್ಯ ಪೇದೆ |
| ವಾಸಸ್ಥಳ | ಃ | ಕೊಪ್ಪಳ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2005 ರಿಂದ 2010 ರವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪಿ ಸಿ 967 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಮಾಗಡಿ ಸಿ ಪಿ ಐ ಅವರ ಆದೇಶದ ಮೇರೆಗೆ ನಾನು ಮತ್ತು ಚಾಸಾ 23 ಭಾಸ್ಕರ್ ರವರು ತಾವರೆಕೆರೆ ಪೊಲೀಸ್ ಠಾಣಾ ಮೊಕದ್ದಮೆ ನಂಬರ್ 363/2010 ಕ್ಕೆ ಸಂಬಂಧಿಸಿದಂತೆ ಆರೋಪಿತರ ಮತ್ತು ಮಾಲು ಪತ್ತೆಗಾಗಿ ನೇಮಕಗೊಂಡಿದ್ದು, ವಿಶ್ವೇಶ್ವರ ನಗರದ ಬಸ್ ನಿಲ್ದಾಣದಲ್ಲಿ ಪ್ರಭು ಎಂಬ ಆರೋಪಿಯನ್ನು ಪತ್ತೆ ಹಚ್ಚಿ ಮದ್ಯಾಹ್ನ 3.00 ಗಂಟೆ ಸಮಯದದಲ್ಲಿ ಠಾಣೆಗೆ ಕರೆತಂದು ಹಾಜರುಪಡಿಸಿರುತ್ತೇವೆ. ಆರೋಪಿ ಪ್ರಭುವನ್ನು ನೋಡಿದರೆ ಗುರುತಿಸಬಲ್ಲೆ. ಇದಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಎಸ್ ಸಿ ಪಿ ವಕೀಲರಿಂದ ಃ</u>

2. ಆರೋಪಿಯನ್ನು ಪತ್ತೆ ಮಾಡಲು ಆರೋಪಿಯ ಭಾವ ಚಿತ್ರ ಅಥವಾ ರೇಖಾ ಚಿತ್ರವನ್ನು ನಮಗೆ ಒದಗಿಸಿರಲಿಲ್ಲ. ಆರೋಪಿಯನ್ನು ಬಂಧಿಸಿದ ಸಲುವಾಗಿ ಸ್ಥಳದಲ್ಲಿ ಆತನ ಮನೆಯ ಸದಸ್ಯರಿಗೆ ತಿಳುವಳಿಕೆ ನೋಟೀಸು ನೀಡಿರುವುದಿಲ್ಲ, ಸಾಕ್ಷಿ ಮುಂದುವರಿದು ಹೇಳುತ್ತಾರೆ ಠಾಣೆಗೆ ಕರೆ ತಂದ ನಂತರ ತನಿಖಾಧಿಕಾರಿ ಅದನ್ನು ಮಾಡಿರುತ್ತಾರೆ. ಆರೋಪಿ ಪ್ರಭುವನ್ನು ನಾನು ಮಧ್ಯಾಹ್ನ ವಿಚಾರಣೆಯಲ್ಲಿ ಹೇಳಿದಂತೆ ಆತನನ್ನು ಸ್ಥಳದಲ್ಲಿ ಬಂಧಿಸಿಲ್ಲ ಮನೆಯಿಂದ ಕರೆತರಲಾಗಿದೆ ಅಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.